**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ  ನ್ಯಾಯಾಲಯ ಶ್ರೀರಂಗಪಟ್ಟಣ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 59/2020**

**ಚಾ.ಸಾ. :-1**
**ಪ್ರಾ.ಸಾ. :-4**

ಹೆಸರು : ಮನೋಜ್
ತಂದೆಯ ಹೆಸರು : ರಮೇಶ್
ವಯಸ್ಸು : 27  ವರ್ಷ
ಉದ್ಯೋಗ : ವ್ಯಾಪರ
ವಾಸಸ್ಥಳ : ಮೈಸೂರು

---

ಪ್ರಮಾಣೀಕರಿಸಲಾದ ದಿನಾಂಕಃ- **21.07.2025**

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :**

ದಿನಾಂಕಃ 09.06.2020 ರಂದು ನನ್ನ ತಂದೆಯವರಿಗೆ ಶ್ರೀರಂಗಪಟ್ಟಣದಲ್ಲಿ ಮಧ್ಯಾಹ್ನ 12.30 ರ ಸಮಯದಲ್ಲಿ ಅಪಘಾತವಾಗಿದ್ದು, ಆ ಬಗ್ಗೆ ಪೊಲೀಸರಿಗೆ ದೂರು ನೀಡಿರುತ್ತೇನೆ. ಸಾಕ್ಷಿಯ ಸಹಿ ಇರುವ ಒಂದು ದಾಖಲೆಯು ಫಿರ್ಯಾದಾಗಿದ್ದು ಅದನ್ನು ಈಗಾಗಲೇ ನಿಪಿ-12 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-12(ಬಿ)** ಎಂದು ಗುರ್ತಿಸಲಾಯಿತು.

ಅಪಘಾತವನ್ನು ನಾನು ನೇರವಾಗಿ ನೋಡಿರುವುದಿಲ್ಲ. ಅಪಘಾತವಾದ ಬಗ್ಗೆ ನನಗೆ ದೂರವಾಣಿ ಕರೆ ಮಾಡಿ ತಿಳಿಸಿದ್ದು, ನಾನು ಪೊಲೀಸ್ ಠಾಣೆಗೆ ಹೋಗಿ ಆ ಬಗ್ಗೆ ದೂರು ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ-**

ನನ್ನ ತಂದೆ ಹೂವಿನ ವ್ಯಾಪಾರ ಮಾಡುತ್ತಿದ್ದರು. ಚಾ.ಸಾ-2 ರವರಿಂದ ನನ್ನ ತಂದೆ ಹೂವನ್ನು ಖರೀದಿಸುತ್ತಿದ್ದರು ಎಂದರೆ ಸರಿ. ಸುಮಾರು 12.30 ರ ಸಮಯಕ್ಕೆ

ನನಗೆ ಚಾ.ಸಾ-2 ರವರು ದೂರವಾಣಿ ಕರೆ ಮಾಡಿ ಅಪಘಾತದ ಬಗ್ಗೆ ತಿಳಿಸಿರುತ್ತಾರೆ. ನಿಪಿ-12 ನ್ನು ನನ್ನ ಸಂಬಂಧಿಕರಾದ ಚಾ.ಸಾ-3 ರವರು ಬರೆದಿರುತ್ತಾರೆ. ನನಗೆ ಓದಲು ಬರುವುದಿಲ್ಲ. ನಿಪಿ-12 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ, ದಿನಾಂಕ ನೆನಪಿಲ್ಲ. ನನ್ನ ತಂದೆಯ ತಪ್ಪಿನಿಂದಲೇ ಅಪಘಾತವಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ :- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**